ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 21ನೇ ಜನವರಿ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸಿರುವ ರಿಜಿಸ್ಟರಾದ ದಸ್ತೈವಜುಗಳು ಯರಡವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಿರುವ ಸಬ್ ರಿಜಿಸ್ಟ್ರಾ ಆಫಿಸುಗಳಲ್ಲಿ ವಾರಸ್‌ದಾರ್ರು ಹಾಜರಾಗಿ ವಾಪಸು ಪಡಿಯದೆ ನಿಂತು ಇರುತ್ತವೆ ಈ ತಾರೀಖು ಲಾಗಾಯತು ಬಂದು ತಿಂಗಳ ವಳಗಾಗಿ ಸದರೀ ತಂಸೂಕುಗಳನ್ನ ಹಾಜರ್ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವಾ ತಂಸೂಕುಗಳಿಗೆ ಬಾಧ್ಯತೆವುಳ್ಳವರಾಗಲಿ ಸಬ್ ರಿಜಿಸ್ಟ್ರಾ ಆಫಿಸುಗಳಲ್ಲಿ ಹಾಜರಾಗಿ ತಮ್ಮ ದಸ್ತೈವಜುಗಳನ್ನು ವಾಪಸ್ ಪಡಿಯಜೇಕು ತಪ್ಪಿದರೆ ರಿಜಿಸ್ಟ್ರೇಷ್ನ ಆಕ್ಟು 85ನೇ ಸೆಕ್ಷನ್ ಮೇರಿಗೆ ಸದರೀ ದಸ್ತೈವಜುಗಳು ನಾಶಪಡಿಸಲ್ಪಡುತ್ತವೆ.

ಸಬ್ ರಿಜಿಸ್ಟ್ರೀ ಆಫಿಸ್ ಹೆಸರು.	ಬುಕ್ಕು ಮತ್ತು ರಿಜಿಸ್ಟರ್ ನಂಬರು.	ತಂಸೂಕು ಬರದುಕೊಟ್ಟವರ ಹೆಸರು.	ತಂಸೂಕು ಬರಸಿಕೊಂಡವರ ಹೆಸರು.	ದಸ್ತೈವಜು ತಾರೀಖು.	ರಿಜಿಸ್ಟರದ ತಾರೀಖು.	ದಸ್ತೈವಜಿನ ಸ್ವಭಾವ.
	1ನೇ ಬುಕ್ಕು 116	ಹೊಸಹಳ್ಳಿ ಮೂಡಬಾಗಿಲ ನಿಂಗಂಣ	ಹೊಸಹಳ್ಳಿ ಹೊಮ್ಮನಮಗ ಜನ್ನಿಮಲ್ಲಂಣ	13—6—92	13—6—92	40 ಜಮ್ರ್ಮಾ ಕ್ರಯಪತ್ರ
	1892—93					
	161	ಕರಡಿ ರಾಮನಹಳ್ಳಿ ಹನುಮಂಣನಮಗ ಬೊಮ್ಮ	ಹೊಸಹಳ್ಳಿ ಗೌಡ ನಂಜಪ್ಪನಮಗ ಲಿಂಗಪ್ಪ	25-6-92	25-6-92	200 ಜಮ್ರ್ಮಾ ಕ್ರಯಪತ್ರ
ತರೀಕೆರೆ ತಾಲ್ಲೂಕು ಸಬ್ ರಿಜಿಸ್ಟ್ರಾ ಆಫಿಸ್.	92—93					
	220	ಕುಳವಾಡಿ ಕರಿಯಂಣನಮಗ ದಾಸಂಣ	ಕುಳವಾಡಿ ಸಂಣ ಹನುಮನಮಗ ಹನುಮ	29-7-92	6-8-92	25 ಹುಲ್ಲುಮನೆ ಕ್ರಯಪತ್ರ
	92—93					
	235	ಬೆಲಗೂರು ಕಟ್ಟಮರಿಯಪ್ಪನ ಮಗ ರೇವಂಣ	ಹಲಸಗೊಂದಿ ಗುರುಬಕಟ್ಟಮಗ ನಂಜಪ್ಪ	11-5-92	17-8-92	100 ಹುಲ್ಲುಮನೆ ಕ್ರಯಪತ್ರ
	92—93					
	398	ಗಂಗೂರು ಮರುಳಯ್ಯನಮಗ ಗುರಂಣ	ಪುಟ್ಟಲಿಂಗಮ್ಮನ ಬಸಂಣನ ಮಗ ಚಂದಯ್ಯ	11-12-92	9-12-92	40 ಜಮ್ರ್ಮಾ ಕ್ರಯಪತ್ರ
	92—93					
ಕೊಪ್ಪ ತಾಲ್ಲೂಕು ಸಬ್ ರಿಜಿಸ್ಟ್ರಾ ಆಫಿಸ್	18	ಹೊಸಮನೆ ನಂಜಪ್ಪಯ್ಯನ ಮಗ ಸುಬ್ರಾಯ	ಮುನಿಯಾರ ಸುಬ್ರಾಯರ ಮಗ ನಾಹುಕಾರ್ ಕೃಷ್ಣಪ್ಪ	10-12-91	15-1-92	99 ಜಮ್ರ್ಮಾ ಕ್ರಯಪತ್ರ
	92—93					
	146	ಕಾಗಿನಗೊಳಿ ತಮ್ಮಂಣಗವುಡನಮಗ ರಾಮಂಣ	ಸಂಪಿಗೆವ.ಠ ರಾಘವೇಂದ್ರ ತೀರ್ಥಸ್ವಾಮಿಗಳವರು	15-12-91	3-9-92	ಸಾಲಿಯಾನಾ 26 ಖಂಡಗ ಭತ್ತ ಕೊಡತಕ್ಕ ಗೇಣಿ ಕರಾರು
	92—93					
ಯಡೆಹಳ್ಳಿ ಸಬ್ ರಿಜಿಸ್ಟ್ರಾ ಆಫಿಸ್	35	ಕಾನೂರಲ್ಲಿರುವ ಹಿರಿಯಂಣಪ್ಪನ ಮಗ ರಾಮಜಂದ್ರಯ್ಯ	ಸೂಪರ್‌ವೈಜರ್ ಮೆ॥ ಸೂರನಾರಾಯಂಣರಾವ್	2-7-92	2-9-92	150 ಜಮ್ರ್ಮಾ ಕ್ರಯಪತ್ರ
	92—93					
ಶೃಂಗೇರಿ ಸಬ್ ರಿಜಿಸ್ಟ್ರಾ ಆಫಿಸ್	96	ಮರಾಟೆ ಹುವನ ಮಗ ಪುಟ್ಟ	ಹಳೆಮನೆ ತಮ್ಮಯ್ಯನಮಗ ರಾಮಪ್ಪ	31-8-92	2-9-92	250 ತೋರಡವು ಪತ್ರ
	91—92					
	97	ನಿಡ್ಡಂಣನ ಮಗ ಕಾಳಂಣ	ಕಳಸಭಟ್ಟರಮಗ ವೆಂಕಟಭಟ್ಟ	7-1-92	12-1-92	192 ಬಾಗಾಯತು ಕ್ರಯಪತ್ರ
	91—92			24-9-91	22-1-92	

ಸಬ್ ರಿಜಿಸ್ಟ್ರೀ ಆಫಿಸ್ ಹೆಸರು.	ಬುಕ್ಕು ಮತ್ತು ರಿಜಿಸ್ಟರ್ ನಂಬರ್.	ತಂಸೂಕು ಬರದುಕೊಟ್ಟವರ ಹೆಸರು.	ತಂಸೂಕು ಬರಸಿಕೊಂಡವರ ಹೆಸರು.	ದಸ್ತೈವಜು ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತೈವಜಿನ ಸ್ವಭಾವ.
ಶ್ರಿಂಗೇರಿ ಸಬ್ ರಿಜಿಸ್ಟ್ರಿ ಆಫಿಸ್.	28 92—93	ನಂಜುಂಡಜೋಯಿಸರ ಹೆಂಡತಿ ಗಂಗಮ್ಮ	ಸೂಭಟ್ಟರಮಗ ಶಾಂಭಟ್ಟ	13-8-92	5—1—92	55—13—0 ಗೇಣಿ ಕರಾರು.
	58 92—93	ಮಲ್ಲಿಕಾರ್ಜನಶಾಸ್ತ್ರಿ ಮಗ ಸುಬ್ಬಾಶಾಸ್ತ್ರಿ	ಕ್ರಿಷ್ಣಯ್ಯನ ಮಗ ಕಾಳಯ್ಯ	24-8-92	4—6—92	64 ಗೇಣಿ ಕರಾರು.
	ಬುಕ್ಕು ನಾಲ್ಕು 14 91—92	ಕುಕ್ಕಶಟ್ಟಿಮಷ ಅಂಗಡಿ ಶೇಷಶಟ್ಟಿ	ಅಂಣಯ್ಯಗವುಡನ ಮಗ ಹಿರಗಂಣಗವುಡ	28-1—92	11—5—92	ಭತ್ತದ ಫಸಲ್ 175 ಕ್ರಯಪತ್ರ.
ಚಿಕ್ಕಮಗಳೂರು ಸಬ್ ರಿಜಿಸ್ಟ್ರಿ ಆಫಿಸ್.	1ನೇ ಬುಕ್ಕು 127 92—93	ಕುರುಬ ಚಿಕ್ಕಂಣನ ಮಗ ಚಿಕ್ಕಂಣ	ಕುರುಬರ ಅಚಂಣನ ಮಗ ದೊಡ್ಡಲಕ್ಕಣ್ಣ	16-12-91	11—5—92	10 ಜಮ್ರ್ಮಾ ಕ್ರಯಪತ್ರ.
	183 92—93	ಕಾಫಿಪ್ಲಾಂಟರ್ ಮಹಮ್ಮದ್ ಬಾಖರ್ ಸಾಹೇಬ್	ತವಕಲ್ ಸಾಹೇಬರ ಮಗ ಖಾಜಿಂಸಾಹೆಬ್	3-6—92	11—5—92	150 ಕಾಫಿತೋಟ ಕ್ರಯಪತ್ರ.
	544 92—93	ವೀರಪ್ಪಯ್ಯನಮಗ ಶಿದ್ದಲಿಂಗಯ್ಯ	ಅಮೃತೇಗವುಡನ ಮಗ ಈರೇಗವುಡ	1-11-92	4—6—92	200 ರೂಪು ದಸ್ತೈವಜು

ಜೆ. ಡಬ್ಲಿಯು. ನೈಟ್,
ರಿಜಿಸ್ಟ್ರಾರ್.

ನೋಟಿಫಿಕೇಷನ್.

ತಾರೀಖು 29ನೇ ಜನವರಿ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತದೀಕೆರೆ ಡಿಪೋದಲ್ಲಿ ಸಾಗವಾನಿ ರಿಜರ್ವೆಡ್ ಸ್ಲೀಪರುಗಳೂ ಮತ್ತು ನಾಟಾಗಳೂ ಮತ್ತು ಸಾಗವಾನಿ ತುದಿ ತುಂಡುಗಳೂ ಶಿಕ್ಕುತ್ತವೆ ಮತ್ತು ಅವುಗಳು ಈ ಕೆಳಗೆ ನಮೂದಿಸಿ ಇರುವ ದರದ ಪ್ರಕಾರ ಮಾರಾಟ ಮಾಡಲ್ಪಡುತ್ತವೆ.

1.	ರಿಜರ್ವೆಡ್ ಸ್ಲೀಪರುಗಳು ದರ 1ಕ್ಕೆ	..	..	..	1— 2—0
2.	ತುದಿ ತುಂಡುಗಳು 1 ಸಲೆ ಆಡಿಗೆ	..	..	..	0—10—0
3.	ರಿಜರ್ವೆಡ್ ನಾಟಾಗಳು ಡಿಟೋ	..	..	..	0—12—0

ಬಿ. ಶ್ರೀನಿವಾಸರಾವ್,
ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರ್.

ಪ್ರಕಟನೆ.

ವಿನಯ ಪೂರ್ವಕ ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ನನ್ನಲ್ಲಿ ನೌಕರಿಯಲ್ಲಿ ಇದ್ದು ಬಿಟ್ಟುವನಾದ ಕನ್ನಡಾ ಜಿಲ್ಲಾ, ಬೆಳ್ಳಿಹಾಡಿ ಕೀನಪ್ಪ ಯಾನೆ ಶ್ರೀನಿವಾಸರಾಯನೆಂಬವನು ತನ್ನ ಸಹಾಯಕ್ಕೆ ಕುಕ್ಕೆಲಾಯದ ಶಾನುಭೋಗ್ ಸುಬ್ಬರಾಯನೆಂಬುವನನ್ನು ಸೇರಿಸಿಕೊಂಡು ನನಿಗೆ ಅನ್ಯಾಯನಷ್ಟ ವುಂಟುಮಾಡಬೇಕೆಂದು ಆಪ್ರಮಾಣಿಕ ಇರಾದೆನಿ ನನ್ನ ಹೆಸರಿನಿಂದ ಕ್ರತಕದ ಹುಂಡಿಯನ್ನು ಲಿಖ್ತದ ಪಟ್ಟಿಯನ್ನು ಸಹ ಬರದು ಅವುಗಳಿಗೆ (ಕೊಪ್ಪ ತಾಲ್ಲೂಕು ಹಾ॥ ಯ॥ ಬಿ) ಯಂದು ಕನ್ನಡ ಅಕ್ಷರಗಳು ಯಿರುವ ನನ್ನ ಹೆಸರಿನ ಮೊಹರಿನಂತೆ ಆಣಾಪತ್ರಿ ಹುಂಡಿಯನ್ನು ಬಿಕ್ರಿಮಾಡಿ ತೀರ್ಥಹಳ್ಳಿ ಪ್ಯಾಟೆಯಲ್ಲಿ ಜವಳಿ ಭರ್ತಿಯಿಂದ ನೈದ ಸಂದರ್ಭದಲ್ಲಿ ಫಿರ್ಯಾದು ನಡದು ಕ್ರಮಪಡುವದೆ ಮೊಕದ್ದಮೆಯು ಬಾಕಿಯಲ್ಲಿ ಯಿರುತ್ತೆಯಲ್ಲದೆ ಸದ್ರಿ ಆಸಾಮಿಗಳು ಪೊಲೀಸಿನವರಿಗೆ ಸಿಕ್ಕದೆ